

# ಜಾತ್ರಾ ಕಾರ್ಯಕ್ರಮ

**ದಿನಾಂಕ 14ರಿಂದ 16 ರವರೆಗೆ ಜಾತ್ರಾ ಮಹೋತ್ಸವದಲ್ಲಿ ಜರುಗುವ ವಿವಿಧ ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ ಕಾರ್ಯಕ್ರಮಗಳ ಸಂಕ್ಷಿಪ್ತ ವಿವರ**

- **ದಿನಾಂಕ 10-01-2017** ಮಂಗಳವಾರದಂದು ಸಂಜೆ 5.00 ಘಂಟೆಗೆ ಬಸವಪಟ ಹಾಗೂ ಅನ್ನಪೂರ್ಣೇಶ್ವರಿ ದೇವಿಗೆ ಉಡಿತುಂಬುವ ಕಾರ್ಯಕ್ರಮ ಜರುಗಲಿದೆ.
- **ದಿನಾಂಕ 11-01-201** ಬುಧವಾರದಂದು ಬೆಳಿಗ್ಗೆ 9.00 ಗಂಟೆಗೆ 'ಜಲ ದೀಕ್ಷೆ ಜಲ ಸಂರಕ್ಷಣೆ ಜಾಗೃತಿ ಅಭಿಯಾನ ' ಕೊಪ್ಪಳ ಗೌರಿಶಂಕರ ದೇವಸ್ಥಾನದ ಬನ್ನಿ ಕಟ್ಟೆಯಿಂದ ಚಾಲನೆಗೊಂಡು ಅಶೋಕ ವೃತ್ತದ ಮೂಲಕ ಗಡಿಯಾರ ಕಂಬದ ಮಾರ್ಗದ ಮೂಲಕ ಶ್ರೀಮಠಕ್ಕೆ ತಲುಪುವದು.
- **ದಿನಾಂಕ 12-01-2017** ಗುರುವಾರದಂದು ಸಂಜೆ 6.00 ಗಂಟೆಗೆ ಶ್ರೀ ಗವಿಸಿದ್ಧೇಶ್ವರ ಮೂರ್ತಿ ಪಲ್ಲಕ್ಕಿ ಉತ್ಸವ ಜರುಗಲಿದೆ.
- **ದಿನಾಂಕ 13-01-2017** ಶುಕ್ರುವಾರದಂದು ಸಂಜೆ 6.00 ಘಂಟೆಗೆ ಲಘು ರಥೋತ್ಸವ ಶ್ರೀ ಗವಿಸಿದ್ಧೇಶ್ವರ ಸಂಗೀತ ವಿದ್ಯಾ ಪೀಠದ ವಿದ್ಯಾರ್ಥಿಗಳಿಂದ ಸಂಗೀತ ಕಾರ್ಯಕ್ರಮ.

**ಕೈಲಾಸ ಮಂಟಪ ವೇದಿಕೆಯಲ್ಲಿ ಜರುಗುವ ವಿವಿಧ ಕಾರ್ಯಕ್ರಮಗಳ ಸಂಕ್ಷಿಪ್ತ ವಿವರ**

- **ದಿನಾಂಕ 14-01-2017 ರಂದು** ಕೈಲಾಸ ಮಂಟಪದ 1 ನೇ ದಿನ ಶ್ರೀ ಗವಿಸಿದ್ಧೇಶ್ವರ ಜಾತ್ರಾ ಮಹೋತ್ಸವ 2017ರ ಉದ್ಘಾಟಕರಾಗಿ ಜ್ಞಾನ ಯೋಗಾಶ್ರಮ ವಿಜಾಪುರದ ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳು ಆಗಮಿಸುತ್ತಾರೆ. **'ಅನುಭಾವಿಗಳ ಅಮೃತ ಚಿಂತನ ಗೋಷ್ಠಿ'**ಯಲ್ಲಿ ನಾಡಿನ ವಿವಿಧ ಪರಮಪೂಜ್ಯರಾದ ಡಾ,ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳು ತರಳಬಾಳು ಬೃಹ್ಮನಮಠ ಸಿರಿಗೇರಿ, ಡಾ.ಚನ್ನಮಲ್ಲ ಮಹಾಸ್ವಾಮಿಗಳು ಕನಕಗಿರಿ, ಶ್ರೀ ಚೆನ್ನಬಸವ ದೇಶಿ ಕೇಂದ್ರ ಮಹಾಸ್ವಾಮಿಗಳು ಕಟ್ನಳ್ಳಿ ದಿವ್ಯ ಸಾನಿಧ್ಯವನ್ನು ವಹಿಸುತ್ತಾರೆ. ಮುಖ್ಯ ಅತಿಥಿಗಳಾಗಿ ಖ್ಯಾತ ಪರಿಸರವಾದಿಗಳಾದ ಶ್ರೀ ಸುರೇಶ ಹೆಬ್ಳಿಕರ ವಹಿಸಲಿದ್ದಾರೆ. ವಿಶೇಷ ಸಂಗಿತ ಕಾರ್ಯಕ್ರಮದಲ್ಲಿ ಶ್ರೀ ಬಾಪು ಪದ್ಮನಾಭ ತಂಡದವರಿಂದ ನಾದ ನಮನ ಜರುಗಲಿದೆ.ಶ್ರೀರಾಮ ಕಾಸರ ಬೆಂಗಳೂರ ಮತ್ತು ಅಬ್ದುಲ್ ಆಡೋ ನೈಜೆರಿಯಾ ವೃಂದವರಿಂದ ಸುಗಮ ಸಂಗೀತವಿದೆ. ಶ್ರೀ ಭಾಷಾ ಹೀರೆಮನಿ ಕಿನ್ನಾಳ ಇವರಿಂದ ತತ್ವ ರಸಮಂಜರಿ ಕಾರ್ಯಕ್ರಮ ಹಾಗೂ ಶ್ರೀ ನರಸಿಂಹ ಜೋಷಿ ಗಂಗಾವತಿ ಇವರಿಂದ " ನಗುವೇ ಜೀವನ " ಹಾಸ್ಯ ಕಾರ್ಯಕ್ರಮವಿರುತ್ತದೆ.
- **ದಿನಾಂಕ 15-01-2017ರಂದು** ಕೈಲಾಸ ಮಂಟಪದ 2ನೇ ದಿನ **'ಭಕ್ತ ಹಿತಚಿಂತನ ಸಭೆ'** ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಸುಪ್ರೀಂಕೋರ್ಟನ ವಿಶ್ರಾಂತ ನ್ಯಾಯಮೂರ್ತಿಗಳಾದ ಶ್ರೀ ಸಂತೋಷ ಹೆಗಡೆ ಆಗಮಿಸುತ್ತಾರೆ. ನಾಡಿನ ವಿವಿಧ ಪರಮಪೂಜ್ಯರಾದ ಶ್ರೀಜಡೆಯ ಶಾಂತಲಿಂಗೇಶ್ವರ ಮಹಾಸ್ವಾಮಿಗಳು ನಿಂಬಾಳ, ಡಾ.ಗುರುಬಸವ ಪಟ್ಟದ್ದೇವರು ಹಿರೇಮಠ ಬಾಲ್ಕಿ, ಶ್ರೀಸಿದ್ಧೇಶ್ವರ ಮಹಾಸ್ವಾಮಿಗಳು ಮೈನಳ್ಳಿ, ಶ್ರೀಚೆನ್ನಮಲ್ಲಿಕಾರ್ಜುನ ಮಹಾಸ್ವಾಮಿಗಳು ತಿಕೋಟಾ, ಶರಣ ಈಶ್ವರ ಮಂಟೂರ ಬಸವಜ್ಞಾನ ಗುರುಕುಲ ಹುನ್ನುರು ದಿವ್ಯಸಾನಿಧ್ಯವಹಿಸಿ ಆಶೀರ್ವಚನ ನೀಡಲಿದ್ದಾರೆ. ವಾದ್ಯಲಹರಿ ಕಾರ್ಯಕ್ರಮದಡಿಯಲ್ಲಿ ತಬಲಾ- ಕು. ರಿಂಪಾ ಶಿವ್ ಕೊಲ್ಕತ್ತಾ, ಘಟಂ- ಪಂ. ಗಿರಿಧರ್ ಉಡುಪ ಬೆಂಗಳುರ, ಸಿತಾರ್- ಪಂ.ಶಫೀಕ್‌ಖಾನ್ ಧಾರವಾಡ, ವಯೋಲಿನ್- ಶ್ರೀಮತ್ತೂರ ಶ್ರೀನಿಧಿ ಬೆಂಗಳುರ ನುಡಿಸಲಿದ್ದಾರೆ.ಹಾಗೂ ಶ್ರೀರವೀಂದ್ರ ಸೋರಗಾಂವ್ ಹಾಗೂ ತಂಡದವರಿಂದ ಸುಗಮ ಸಂಗೀತ ಕಾರ್ಯಕ್ರಮವಿದೆ.
- **ದಿನಾಂಕ 16-01-2017ರಂದು** ಕೈಲಾಸ ಮಂಟಪದ 3ನೇ ದಿನ **ಸಮಾರೋಪ ಸಮಾರಂಭದಲ್ಲಿ** ಶ್ರೀ ನಾಡೋಜ ಡಾ.ಅನ್ನದಾನೇಶ್ವರ ಮಹಾಶಿವಯೋಗಿಗಳು ಮುಂಡರಗಿ ಇವರು ಸಾನಿಧ್ಯ ವಹಿಸುವರು.ಮುಖ್ಯ ಅತಿಥಿಗಳಾಗಿ ಶ್ರೀಸುಬೇದಾರ್ ಸಿಂಗ್ ಯಾದವ್ ಪರಮವೀರ ಚಕ್ರ ಪದಕ ಪುರಸ್ಕೃತರು ದೆಹಲಿ ಆಗಮಿಸುತ್ತಾರೆ.
  ಸಮಾರೋಪ ನುಡಿಯನ್ನು ನಾದಬ್ರಹ್ಮ ಡಾ. ಹಂಸಲೇಖ ಬೆಂಗಳೂರ ನುಡಿಯಲಿದ್ದಾರೆ.
  ಇದೇ ವೇದಿಕೆಯಲ್ಲಿ ಶ್ರೀಮತಿ ಎಂ ಡಿ ಪಲ್ಲವಿ ಬೆಂಗಳುರ ಹಾಗೂ ವೃಂದದವರಿಂದ ಭಾವ ಮಾಧುರ್ಯ ಇರುತ್ತದೆ. ರಾತ್ರಿ ಇದೇ ವೇದಿಕಯಲ್ಲಿ ಗಂಗಾವತಿಯ ಬಿ ಪ್ರಾಣೇಶ ಇವರಿಂದ ನಗುವದೇ ಸ್ವರ್ಗ ಹಾಸ್ಯ ಕಾರ್ಯಕ್ರಮ ಇರುತ್ತದೆ.